


ಎಡದಿಂದ ಬಲಕ್ಕೆ:

1. ಕರ್ಪೂರದ ಕಲಾಕೃತಿಗೆ ಒಂದು ಪಾರಿತೋಷಕ (3)
3. ವರ್ತಕರಿಗೆಂದೇ ಅನುಕೂಲಗಳು ಬಗೆ ಬಗೆ (4)
4. ಎಂಥ ಸುವಾಸನೆಯೊ ತಿರುಗಾಮುರುಗಾ (4)
6. ಹಪ್ಪಳ ಮುರಿಯುವ ಸದ್ದು ಕೇಳಿಸಿತೇ? (3)
7. ಮರೆತುಹೋಯಿತು ಮತ್ತೆ ಪ್ರತ್ಯುತ್ತರ (4)
9. ಆಲಾಪನೆಯನ್ನ ಆರಂಭಿಸಿದ್ದೇ ತಡ, ಓಟ (4)
11. ವಿವರವನ್ನೆಲ್ಲ ಪಡೆದಿದ್ದು ವಾರದಾರಂಭದ ದಿನ (4)
13. ಕೊಟ್ಟದ್ದೆಲ್ಲ ಕಳೆದುಹೋಯಿತು 'ಒಳ್ಳೆಯದಲ್ಲದ ಸಮಯ' (4)
15. ಅಂದವನ್ನು ಕಾಣುವ ಆಸಕ್ತಿಗೆ ಆರಂಭವೇ ಇಲ್ಲ (3)
17. ಬಡಿಗೆ ಹಿಡಿದು ನಿಂತವರದು ಬರೀ ಜಂಬ (4)
18. ಕೂಡಿಡುವ ಹಣಕ್ಕೂ ಇದೇನು ನಿಯಂತ್ರಣ? (4)
19. ಕೂತರೂ ನಿಂತರೂ ಕಾರಣ ಸೃಷ್ಟಿಕರ್ತ (3)

ಮೇಲಿಂದ ಕೆಳಕ್ಕೆ:

1. ಹೊಸ ಪರಿಯದು ಹೀಗೆ ಅಪಹಾಸ್ಯ (4)
2. ಕೊಳ್ಳುವವರು ಬಹಳ ಇಲ್ಲವೆಂದೇ ಆತಂಕ (4)
3. ಕರಾರಿನ ತಾರೀಕಿನ ಬಗೆಗೆ ಭಾರೀ ವಿರೋಧ (4)
5. ಪರಕೆಯನ್ನು ಕೊಳ್ಳುತ್ತಿರುವವ ನಮ್ಮವನಲ್ಲ (4)
7. ಉದ್ಯೋಗ ಮುಂದುವರೆದ ಸುದ್ದಿ– ತುಂಬ ಸಿಹಿ (3)
8. ಷರತ್ತು ಸರಿಪಡಿಸಿದರೆ ಮಂಜು ಸುರಿದೀತು (3)
9. ಪಂಥಕ್ಕೆ ಆಹ್ವಾನ ನೀಡುವ ಧ್ವಜ ನೋಡಿದಿರಾ? (3)
10. ನ್ಯಾಯ ಕೇಳಲು ಬಂದದ್ದು ಒಬ್ಬ ಪಾಂಡವ (3)
12. ಕರೆಂಟಿನ ಹಾದಿಗೆ ಆಧಾರಸ್ತಂಭ (4)
14. ಕಡೆಗೂ ಕಾಣಿಸಿತು ನೋಡಿ ಅಡವಿಯ ಗಂಡೆಮ್ಮೆ (4)
15. ಪದ್ಯದ ಅಕ್ಕ ಪಕ್ಕ ಬೋಧಕ (4)
16. ನಿತ್ಯ ಕೈ ಜೋಡಿಸಿದೊಡನೆ ಸೂರ್ಯ ಪ್ರತ್ಯಕ್ಷ (4)

## ಪದಬಂಧ 07-03-2013 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಪ್ರಸಾಧನ; 3. ಅನಾಥ; 4. ವಿಹಾರ; 6. ಮಡಿಕೋಲು; 7. ಕಾಮನೆ; 9. ಹಂತಕ; 11. ಗದರು; 13. ಕೆದರು; 15. ಮುಜುಗರ; 17. ರಜನಿ; 18. ಸಾಗರ 19. ಸುಡುಜಲ.

ಮೇಲಿಂದ ಕೆಳಕ್ಕೆ:

1. ಪ್ರಥಮ; 2. ನವಿಲು; 3. ಅಸೀಮ; 5. ರಜತ; 7. ಕಾಳಗ; 8. ನೇತ್ರರು; 9. ಹಂಚಿಕೆ; 10. ಕಸರು; 12. ದಸರ; 14. ದತ್ತೂರ; 15. ಮುನಿಸು; 16. ರಸಾಲ.

# ಪ್ರಶ್ನಾಂಕಣ

## ಮ್ಯಾಮತ್ - ಅದೇನು?

ಮ್ಯಾಮತ್–ಅದು ಈಗಿನ ಆನೆಗಳ ನೇರ ಪಿತಾಮಹ. 'ಮ್ಯಾಮೂತಸ್ ಪ್ರೈಮಿಜೀನಿಯಸ್' ಎಂಬ ವೈಜ್ಞಾನಿಕ ಹೆಸರಿನ ಈ ಪ್ರಾಚೀನ ಆನೆಗಳದು ಈಗಿನ ಆನೆಗಳನ್ನು ಮೀರಿಸುವ ಬೃಹದಾಕಾರ. ಹಾಗಾಗಿಯೇ ಆಂಗ್ಲ ಭಾಷೆಯಲ್ಲಿ ಅತಿ ಬೃಹದ್ಗಾತ್ರವನ್ನು ಸೂಚಿಸುವ ಗುಣವಾಚಕವಾಗಿಯೂ ಇದೇ ಪದದ ಬಳಕೆ.

ವಿಸ್ಮಯ ಏನೆಂದರೆ ಮ್ಯಾಮತ್‌ಗಳೆಂಬ ಈ 'ಮಹಾಗಜ'ಗಳಲ್ಲೇ ಏಳು ಪ್ರಭೇದಗಳಿದ್ದುವು. 'ಊಲಿ ಮ್ಯಾಮತ್' ಅವುಗಳಲ್ಲೆಲ್ಲ ತುಂಬ ಪ್ರಸಿದ್ಧ (ಚಿತ್ರ ನೋಡಿ). ಅದರದು ಹದಿಮೂರು ಅಡಿ ಎತ್ತರ, ಎಂಟು–ಹತ್ತು ಟನ್ ತೂಕ, ಹತ್ತು ಅಡಿಗಿಂತ ಅಧಿಕ ಉದ್ದದ ಮೇಲ್ಮುಖನಾಗಿ ಬಾಗಿದ ಜೋಡಿ ದಂತ. ತುಂಬ ವಿಶೇಷ ಏನೆಂದರೆ ಅದರ ದೇಹವನ್ನಿಡೀ ಆವರಿಸಿದ್ದ ಉದ್ದ ಕೂದಲುಗಳ ದಟ್ಟ ರಾಶಿ. ನಿಸರ್ಗವೇ ತೊಡಿಸಿದ್ದ ಈ ಬಗೆಯ ಹೊದಿಕೆಯಿಂದಲೇ ಈ ಮಹಾಗಜಕ್ಕೆ 'ಊಲಿ ಮ್ಯಾಮತ್' ಎಂಬ ಹೆಸರು.



ಭೂ ಇತಿಹಾಸದಲ್ಲಿ ಈಗ್ಗೆ ದಶಲಕ್ಷ ವರ್ಷ ಹಿಂದೆ ಆರಂಭಗೊಂಡ 'ಪ್ಲಿಯೋಸೀನ್ ಯುಗ'ದಲ್ಲಿ ಮ್ಯಾಮತ್‌ಗಳು ಧರೆಯಲ್ಲಿ ಅವತರಿಸಿ ಈಗ್ಗೆ ಎರಡು ದಶಲಕ್ಷ ವರ್ಷ ಹಿಂದೆ ಪ್ರಾರಂಭವಾದ 'ಪ್ಲೀಸ್ಟೋಸೀನ್ ಯುಗ'ದಲ್ಲಿ ಉಚ್ಛ್ರಾಯ ಸ್ಥಿತಿ ತಲುಪಿದ್ದುವು. ಏಷಿಯ, ಯೂರೋಪ್ ಮತ್ತು ಉತ್ತರ ಅಮೆರಿಕ ಖಂಡಗಳಿಗೆ ಸೇರಿದ ಆರ್ಕ್‌ಟಿಕ್ ಸನಿಹದ ಶೀತವಲಯ ಈ ಮಹಾ ಗಜಗಳ ವಾಸಕ್ಷೇತ್ರವಾಗಿತ್ತು. ಪ್ಲೀಸ್ಟೋಸೀನ್ ಯುಗದಲ್ಲಿ ಧರೆಯನ್ನು 'ಹಿಮಯುಗ'ವೊಂದು ಆವರಿಸಿತ್ತು ಕೂಡ. ಆಗಿನ ಶೀತಲ ಪರಿಸರದಲ್ಲಿ ಬೆಳೆದಿದ್ದ ಕೆಲ ವಿಶಿಷ್ಟ ಹುಲ್ಲು ಗಿಡಗಳಷ್ಟೇ ಈ ಆನೆಗಳ ಆಹಾರ. ಈಗಿನ ಆನೆಗಳಂತೆ ವೃಕ್ಷಗಳಂತೆ ಎಲೆ, ರೆಂಬೆ ತೊಗಟೆಗಳನ್ನು ಆ ಮಹಾಗಜಗಳು ತಿನ್ನುತ್ತಿರಲಿಲ್ಲ. ಮ್ಯಾಮತ್‌ಗಳಿದ್ದ ಕಾಲದಲ್ಲೇ, ಅವುಗಳಿದ್ದ ಪ್ರದೇಶಗಳಲ್ಲೇ ಪ್ರಾಚೀನ ಮಾನವರೂ–ವಿಶೇಷವಾಗಿ 'ನಿಯಾಂಡರಥಾಲ್ ಮನುಷ್ಯ'ರು–ನೆಲೆಸಿದ್ದರೆಂಬುದು ಗಮನಿಸಬೇಕಾದ ಅಂಶ.

ಒಟ್ಟು ಸುಮಾರು ನಾಲ್ಕು ದಶಲಕ್ಷ ವರ್ಷಕಾಲ ಬಾಳುವೆ ನಡೆಸಿದ ಮ್ಯಾಮತ್‌ಗಳು ಈಗ್ಗೆ ಹತ್ತು ಸಾವಿರ ವರ್ಷ ಹಿಂದಿನ ಸುಮಾರಿಗೆ ಸಂಪೂರ್ಣ ಅಳಿದುಹೋದುವು. ಮ್ಯಾಮತ್‌ಗಳ ವಿನಾಶಕ್ಕೆ ಎರಡು ಪ್ರಧಾನ ಕಾರಣಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. ಈಗ್ಗೆ ಹತ್ತು ಸಾವಿರ ವರ್ಷ ಹಿಂದಿನ ವೇಳೆಗೆ ಪ್ಲೀಸ್ಟೋಸೀನ್ ಹಿಮಯುಗ ಅಂತ್ಯಗೊಂಡು ಬೆಚ್ಚನೆಯ ಕಾಲ ಆರಂಭಗೊಂಡ ಜೊತೆಗೇ ಆ ಹೊಸ ಪರಿಸರಕ್ಕೆ ಒಗ್ಗದೆ ಮ್ಯಾಮತ್‌ಗಳ ಮೇವಿನ ಹುಲ್ಲು ಗಿಡಗಳು ನಾಶಗೊಂಡವು. ಹಾಗಾಗಿ ಮ್ಯಾಮತ್‌ಗಳು ಆಹಾರವಿಲ್ಲದಾದುವು. ಎರಡನೆಯದಾಗಿ ಆಗಿನ ಮನುಷ್ಯರು ಆಹಾರಕ್ಕಾಗಿಯೂ ಚರ್ಮಕ್ಕಾಗಿಯೂ ಮ್ಯಾಮತ್‌ಗಳನ್ನು ವಿಪರೀತ ಬೇಟೆಯಾಡಿದ್ದು ಮ್ಯಾಮತ್‌ಗಳ ಸರ್ವನಾಶಕ್ಕೆ ಕಾರಣವಾಯಿತು.

■ ಎನ್. ವಾಸುದೇವ್